ಹರಿಹರ ಪಾಲಿಫೈಬರ್‌ಗೆ ವಿದ್ಯುತ್ ಸರಬರಾಜು

೨೫೭೬. ಶ್ರೀ ಸಿ. ಎಂ. ಉದಾಸಿ (ಹಾನಗಲ್) ಮತ್ತು ಶ್ರೀ ಕೆ.ಎಸ್. ಬೀಳಗಿ (ಬ್ಯಾಡಗಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ ಏಪ್ರಿಲ್‌ನಿಂದ ೧೯೮೮ ಏಪ್ರಿಲ್‌ವರೆಗೆ ಪ್ರತಿ ತಿಂಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಂವರು ಹರಿಹರ ಪಾಲಿಫೈಬರ್ ಉದ್ಯಮದವರಿಗೆ ವಿದ್ಯುತ್ ಬಳಕೆಗಾಗಿ ವಿಧಿಸಿದ ಹಣವೆಷ್ಟು?

ಆ) ಅಲ್ಲಿಯ ವಿದ್ಯುತ್ ಇಲಾಖೆಯ ಅಧಿಕಾರಿಗಳು ಹರಿಹರ ಪಾಲಿಫೈಬರ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಇಲಾಖೆಗೆ ಬರುವ ಆದಾಯವನ್ನು ನಷ್ಟ ಮಾಡಲು ಕಾರಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಬಗ್ಗೆ ಮಂಡಳಿಗೆ ದೂರು ಬಂದಿದ್ದು ಅದನ್ನು ಕೂಲಂಕಷವಾಗಿ ತಾಂತ್ರಿಕ ಪರಿಶೋಧನೆ ಸೆಲ್‌ನಿಂದ ತನಿಖೆ ಮಾಡಿಸಲಾಗಿ ಆಪಾದನೆ ನಿರಾಧಾರವಾದುದ್ದೆಂದು ಕಂಡುಬಂದಿದೆಯೆಂದು ಮಂಡಳಿಗೆ ಯಾವ ವಿಧವಾದ ನಷ್ಟವೂ ಸಂಭವಿಸಿಲ್ಲವೆಂದು ತಿಳಿಸಲಾಗಿದೆ.

ಹರಿಹರ ಪಾಲಿಫೈಬರ್‌ರವರಿಗೆ ಏಪ್ರಿಲ್ ೮೮ರ ವರೆಗೆ ವಿದ್ಯುತ್ ಬಳಕೆಗಾಗಿ ವಿಧಿಸಿದ ಹಣದ ವಿವರ

ಕ್ರಮ ಸಂಖ್ಯೆ	ವಿದ್ಯುತ್ ಬಳಕೆಯಾದ ತಿಂಗಳು		ಬಳಕೆಯಾದ ವಿದ್ಯುತ್ತಿಗೆ ವಿಧಿಸಿದ ಹಣ ರೂ. ಪೈ.	ವಿದ್ಯುತ್ ತೆರಿಗೆ ರೂ. ಪೈ.	ಒಟ್ಟು ಹಣ ರೂ. ಪೈ.
೧	ಏಪ್ರಿಲ್	೧೯೮೬	೨೧,೪೧,೪೫೨-೬೬	೨,೮೯,೪೪೦-೦೦	೨೪,೩೧,೮೯೨-೬೬
೨	ಮೇ	,,	೨೩,೩೧,೬೪೯-೦೦	೩,೧೪,೪೬೦-೧೦	೨೬,೪೬,೪೨೯-೦೦
೩	ಜೂನ್	,,	೨೪,೫೯,೫೫೬-೨೮	೩,೩೮,೦೪೦-೦೦	೨೭,೯೭,೫೯೬-೨೮
೪	ಜುಲೈ	,,	೨೪,೭೪,೫೬೮-೨೪	೨,೮೭,೭೪೦-೦೦	೨೭,೬೨,೨೦೮-೨೪
೫	ಆಗಸ್ಟ್	,,	೨೦,೦೬,೨೬೬-೯೧	೩,೧೨,೮೪೦-೦೦	೨೩,೧೯,೧೦೬-೯೧
೬	ಸೆಪ್ಟೆಂಬರ್	,,	೨೪,೩೫,೪೯೫-೬೨	೩ ೩೭,೬೮೦-೦೦	೨೭,೭೩,೧೭೫-೬೨
೭	ಅಕ್ಟೋಬರ್	,,	೨೫,೨೫,೪೫೯-೬೨	೩,೫೨,೯೮೦-೦೦	೨೮,೭೮,೪೩೯-೬೨
೮	ನವೆಂಬರ್	,,	೨೯,೩೫,೮೬೯-೩೪	೩,೫೪,೬೨೦-೦೦	೩೨,೯೦,೪೬೯-೩೪
೯	ಡಿಸೆಂಬರ್	,,	೩೦,೨೭,೯೫೦-೧೪	೩,೭೨,೨೬೦-೦೨	೩೩,೯೮,೨೧೦-೧೪
೧೦	ಜನವರಿ	೧೯೮೭	೩೦,೯೫,೯೪೬-೧೪	೩,೮೧,೯೬೦-೦೦	೩೪,೭೭,೨೦೬-೧೪
೧೧	ಫೆಬ್ರುವರಿ	,,	೨೦,೯೮,೯೨೪-೪೨	೨,೮೦,೪೪೦-೦೦	೨೩,೭೯,೩೬೪-೪೨
೧೨	ಮಾರ್ಚ್	,,	೨೪,೫೦,೦೬೩-೭೪	೨,೭೧,೯೮೦-೦೦	೨೭,೨೨,೦೪೩-೭೪
೧೩	ಏಪ್ರಿಲ್	,,	೨೫,೫೭,೨೧೧-೬೨	೩,೫೮,೩೮೦-೦೦	೨೯,೧೫,೫೯೧-೬೨
೧೪	ಮೇ	,,	೨೯,೭೦,೯೭೧-೭೫	೩,೬೧,೦೮೦-೦೦	೩೩,೩೨,೦೫೧-೭೫
೧೫	ಜೂನ್	,,	೩೬,೬೩,೩೩೪-೨೮	೪,೦೮,೭೮೦-೦೦	೪೦,೭೨,೧೧೪-೨೮
೧೬	ಜುಲೈ	,,	೩೫,೮೬,೭೮೮-೨೪	೩,೯೦,೭೮೦-೦೦	೩೯,೭೭,೫೬೮-೨೪
೧೭	ಆಗಸ್ಟ್	,,	೩೫,೮೮,೧೯೯-೪೪	೩,೯೦,೯೬೦-೦೦	೩೯,೭೯,೧೫೯-೪೪
೧೮	ಸೆಪ್ಟೆಂಬರ್	,,	೩೬,೭೦,೬೧೦-೫೮	೪,೦೯,೫೦೦-೦೦	೪೦,೮೦,೧೧೦-೫೮
೧೯	ಅಕ್ಟೋಬರ್	,,	೩೫,೦೧,೯೭೩-೬೬	೩,೭೬,೭೪೦-೦೦	೩೮,೭೮,೭೧೩-೬೬
೨೦	ನವೆಂಬರ್	,,	೩೧,೯೫,೬೩೮-೭೬	೩,೫೦,೪೬೦-೦೦	೩೫ ೪೬,೯೯೮-೭೬
೨೧	ಡಿಸೆಂಬರ್	,,	೩೨,೧೦,೦೫೦-೭೬	೩ ೫೨,೩೬೦-೦೦	೩೫,೬೨,೬೧೦-೭೬
೨೨	ಜನವರಿ	೧೯೮೮	೩೦,೯೯,೧೫೦-೭೪	೩,೨೮,೧೪೦-೦೦	೩೩,೩೭,೯೯೦-೭೪
೨೩	ಫೆಬ್ರುವರಿ	,,	೨೫,೨೮,೧೭೫-೭೫	೨,೬೪೪,೨೪೦-೦೦	೨೭,೭೨,೪೧೫-೭೫
೨೪	ಮಾರ್ಚ್	,,	೨೭,೫೯,೫೦೨-೩೪	೨,೯೬,೨೦೦-೦೦	೩೦,೫೫,೭೦೨-೩೪

ಶ್ರೀ ಕೆ. ಎಸ್. ಬೀಳಗಿ:— ಈ ತನಿಖಾ ವರದಿಯನ್ನು ದಯವಿಟ್ಟು ಸಭೆಗೆ ಒಪ್ಪಿಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ:— ಈ ಬಗ್ಗೆ ಅನೇಕ ದೂರುಗಳು ಬಂದಿದ್ದು, ಯೂನಿಯನ್ ಅವರು ಹಾಗೂ ಕೆಲವರು ಇದರ ಬಗ್ಗೆ ದೂರು ಮಾಡಿದ್ದಾರೆ. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆಯನ್ನು ನಮ್ಮ ವಿಜಿಲೆನ್ಸ್‌ಸೆಲ್‌ನವರು ಮಾಡಿದ್ದಾರೆ. ಜೊತೆಗೆ ನಾನು ಕೂಡ ರಾಣಿಬೆನ್ನೂರಿಗೆ ಹೋದಾಗ ಸಂಪೂರ್ಣವಾಗಿ ಲೆಡ್ಜರ್ ತರಿಸಿ ಇದರಲ್ಲಿ ಏನಾದರೂ ಅನ್ಯಾಯ ನಡೆದಿದೆಯೇ ಎಂದು ಪರಿಶೀಲನೆ ಮಾಡಿದ್ದೇನೆ.

ಮುಖ್ಯವಾಗಿ ಅಲ್ಲಿ ಅವರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯಲ್ಲಿ ಕೆಲವು ತಿಂಗಳು ವ್ಯತ್ಯಾಸ ಬಂದಿರುವುದರಿಂದ ಅನುಮಾನ ಎಲ್ಲರಿಗೂ ಉಂಟಾಗಿದೆ. ಅದಕ್ಕೆ ಕಾರಣವೇನೆಂದರೆ ಅವರದೇ ಆದ ಒಂದು ದೊಡ್ಡ ಕ್ಯಾಪ್ಟೀವ್ ಜನರೇಟರ್ ಇದೆ. ಅವರು ಯಾವಾಗ ಹೆಚ್ಚು ಉತ್ಪಾದನೆ ಮಾಡಿಕೊಂಡಿದ್ದಾರೆ ಆಂತಹ ಸಂದರ್ಭದಲ್ಲಿ ವಿದ್ಯುತ್ ಮಂಡಲಿಯ ವಿದ್ಯುತ್ತನ್ನು ಕಡಿಮೆ ಉಪಯೋಗಿಸಿದ್ದಾರೆ. ಯಾವಾಗ ಅವರು ಇದನ್ನು ಕಡಿಮೆ ಉಪಯೋಗಿಸಿದ್ದಾರೆ ಅಂತಹ ಸಂದರ್ಭದಲ್ಲಿ ವಿದ್ಯುತ್ ಮಂಡಲಿಯ ವಿದ್ಯುತ್ತನ್ನು ಹೆಚ್ಚು ಉಪಯೋಗ ಮಾಡಿದ್ದಾರೆ. ಆದರಿಂದ ಕೆಲವು ಅನುಮಾನಗಳು ಬಂದು ಈ ರೀತಿಯ ದೂರುಗಳು ಬಂದಿರುತ್ತದೆಯೇ ಹೊರತು ಅಲ್ಲಿ ಯಾವುದೇ ವಿಧವಾದ ಅನುಮಾನಕ್ಕೆ ಆಸ್ಪದ ಇರುವುದಿಲ್ಲ. ನಾನೇ ಖುದ್ದಾಗಿ ಹೋಗಿ ಇದನ್ನು ಪರಿಶೀಲನೆ ಮಾಡಿದ್ದೇನೆ.

(ಪ್ರಶ್ನೆ ಸಂಖ್ಯೆ (೨೧೮೫) ಶ್ರೀ ಹೆಚ್. ಕೆ. ಕುಮಾರಸ್ವಾಮಿ ಸದಸ್ಯರು ಹಾಜರಿರಲಿಲ್ಲ.)

ಕೊಡಗು ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಬಗ್ಗೆ.

೨೧೮೬. ಶ್ರೀಮತಿ ಸುಭಾಷಿಣಿ (ವಿರಾಜಪೇಟೆ).— ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಸದರಿ ಕೈಗಾರಿಕಾ ಘಟಕಗಳು ಉಪಯೋಗಿಸುವ ಸ್ಥಳೀಯ ಕಚ್ಚಾ ವಸ್ತುಗಳಾವುವು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೩೩೫ ಘಟಕಗಳನ್ನು ನೊಂದಾಯಿಸಿದೆ. ಮಾಹಿತಿಯನ್ನು ಅನುಬಂಧ–೧ರಲ್ಲಿ ನೀಡಲಾಗಿದೆ.

ಆ) ಈ ಘಟಕಗಳು ಸ್ಥಳೀಯವಾಗಿ ಲಭ್ಯವಿರುವ ಕಾಫಿ ಬೀಜ, ಭತ್ತ, ಮರಮಟ್ಟುಗಳು, ಹಣ್ಣುಗಳು ಇತ್ಯಾದಿಗಳನ್ನು ಉಪಯೋಗಿಸುತ್ತಿವೆ.

ANNEXURE-I

LIST OF SSI UNITS REGISTERED IN KODAGU DISTRICT-TALUKWISE DURING THE YEARS 1985-86 TO 1987-88.

Sl. No.	Year	No. of SSI Units Registerred			Total
		Madikeri Taluk	Somwarpet Taluk	Virajpet Taluk	
1.	1985-86	34	45	38	117
2.	1986-87	37	46	32	115
3.	1987-88	43	35	25	103
		114	126	95	335

NOTE :

1 There are no medium scale industries registered in Kodagu District.